ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ತಹಶೀಲ್ದಾರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/10/2015-16. ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ನೇವಾರ ಸಣ್ಣ ಬಸಪ್ಪ ತಂದೆ ಕರಿಯಪ್ಪ<br>2)ತಿಂದಮ್ಮ ಗಂಡ ಲೇಟ್ ನೇವಾರ ಬಸಪ್ಪ<br>3)ನೇವಾರ ಕರಿಯಪ್ಪ ತಂದೆ ಬಸಪ್ಪ<br>ಅಮ್ಮನಕೇರಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಬಸವರಾಜ ತಂದೆ ಲೇಟ್ ನೇವಾರ ಬಸಪ್ಪ<br>2)ಬಸಪ್ಪ ತಂದೆ ಬಸಪ್ಪ<br>ಅಮ್ಮನಕೇರಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 281ಬಿ. 282. 283. 352/1. ವಿಸ್ತೀರ್ಣ 2-94. 8-23. 2-72. 0-12. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 281ಬಿ. 282. 283. 352/1. ವಿಸ್ತೀರ್ಣ 2-94. 8-23. 2-72. 0-12. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ತಿಂದಮ್ಮ ಗಂಡ ಲೇಟ್ ನೇವಾರ ಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮ್ಮನಕೇರಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 19-02-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಬಸವರಾಜ ತಂದೆ ಲೇಟ್ ನೇವಾರ ಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 16/2014-15. ದಿನಾಂಕ 20-03-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 24-06-2015. ರಿಂದ 28-06-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಎರಡನೇ ಅರ್ಜಿದಾರರ ಪರ ನ್ಯಾಯಾವಾದಿಗಳು ಅಮ್ಮನಕೇರಿ ಗ್ರಾಮದ ಸನಂ 281ಬಿ. 282. 283. 352/1. ವಿಸ್ತೀರ್ಣ 2-94. 8-23. 2-72. 0-12. ಎಕ್ರೆ ಜಮೀನುಗಳು ಎರಡನೇ ಅರ್ಜಿದಾರಳ ಗಂಡನಾದ ನೇವಾರ ಬಸಪ್ಪ ತಂದೆ ಬಸಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 03-02-2013 ರಂದು ನಿಧನ ಹೊಂದಿರುತ್ತಾರೆ. ಕಾರಣ ಸದರಿ ನೇವಾರ ಬಸಪ್ಪ ತಂದೆ ಬಸಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಎರಡನೇ ಅರ್ಜಿದಾರಳಾದ ತಿಂದಮ್ಮ ಗಂಡ ಲೇಟ್ ನೇವಾರ ಬಸಪ್ಪ ಇವರ ಹೆಸರನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ 01 ನೇ ಅರ್ಜಿದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಜಮೀನುಗಳಾಗಿರುತ್ತವೆ. ಸನಂ 283. ವಿಸ್ತೀರ್ಣ 2-72. ಎಕ್ರೆ ಜಮೀನು ವಾದಿ ಮತ್ತು ಪ್ರತಿವಾದಿಗಳು ಪಾಲು ವಿಭಾಗ ಲಖೀತವಾಗಲಿ ಅಥವಾ ಮೌಖಿಕವಾಗಿಯಾಗಲಿ ಆಗಿರುವುದಿಲ್ಲ ಕಾರಣ ಎರಡನೇ ಅರ್ಜಿದಾರಳಾದ ತಿಂದಮ್ಮ ಗಂಡ ಬಸಪ್ಪ ಇವರ ಹೆಸರಲ್ಲಿ ಖಾತಾ ಬದಲಾವಣೆ ಮಾಡ ಬಾರದೆಂದು ಮತ್ತು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ 01 ನೇ ಪ್ರತಿವಾದಿ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಪ್ರತಿವಾದಿಯ ಪಿತ್ರಾರ್ಜಿತ ಜಮೀನು ಆಗಿದ್ದು ಅವರು ಇಂದಿನವರೆಗೆ ಪಾಲು ವಿಭಾಗ ಮಾಡಿಕೊಂಡಿರುವುದಿಲ್ಲ ಹಾಗೂ ಅವರು ಅನಕ್ಷರಸ್ತರಾಗಿರುವುದರಿಂದ ಪಹಣಿಯಲ್ಲಿ ಅವರ ಚಿಕ್ಕಪ್ಪನಾದ ನೇವಾರ ಯಲ್ಲಪ್ಪನ ಮಗ ಸಣ್ಣ ಬಸಪ್ಪ ಹೆಸರಲ್ಲಿ ಜಂಟಿಯಾಗಿ ನಮೂದಾಗಿರುತ್ತದೆ. ಕಾರಣ ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ವಿಚಾರಣೆಯಲ್ಲಿ 02 ನೇ ಪ್ರತಿವಾದಿಯ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಅರ್ಜಿದಾರರು ಆದ ಬಸಪ್ಪ ತಂದೆ ಬಸಪ್ಪ ಇವರ ಪಿತ್ರಾರ್ಜಿತ ಜಮೀನುಗಳು ಆಗಿದ್ದು ಸದರಿ ಜಮೀನುಗಳು ಮೂಲತಹ ಬಸಪ್ಪನ ಆಸ್ತೀಗಳಾಗಿದ್ದು ಅವರಿಗೆ ಎರಡು ಜನ ಹೆಂಡತಿಯರಿದ್ದು ಉಭಯರಿಗೆ ಎರಡು ಜನ ಗಂಡು ಮಕ್ಕಳಿದ್ದು ಅವರ ವಾರಸುದಾರರು ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಅರ್ಜಿದಾರರೊಬ್ಬರೆ ಗಂಡು ಮಗನಾಗಿದ್ದು ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಕೈಬಿಟ್ಟು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುವುದರಿಂದ ಅರ್ಜಿದಾರರಾದ ಬಸಪ್ಪ ತಂದೆ ಬಸಪ್ಪ ಇವರನ್ನು ಎರಡನೇ ಪ್ರತಿವಾದಿಯಾಗಿ ಸೇರ್ಪಡೇ ಮಾಡಬೇಕೆಂದು ಕೋರಿ ವಿಚಾರಣೆ ಹಂತದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಸದರಿ ಜಮೀನುಗಳ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮ್ಮನಕೇರಿ ಗ್ರಾಮದ ಸನಂ 281ಬಿ. 282. 283. 352/1. ವಿಸ್ತೀರ್ಣ 2-94. 8-23. 2-72. 0-12. ಎಕ್ರೆ ಜಮೀನುಗಳ ವಿವಾದವು ಸಿವಿಲ್ ಸ್ವರೂಪವೆಂದು ಕಂಡು ಬಂದ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ತಿಂದಮ್ಮ ಗಂಡ ಲೇಟ್ ನೇವಾರ ಬಸಪ್ಪ ಹಾಗೂ ಇತರರು ಅಮ್ಮನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎನ್.ಪರಮೇಶ್ವರಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಬಸವರಾಜ ತಂದೆ ಲೇಟ್ ಬಸಪ್ಪ ಅಮ್ಮನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎಂ.ಸೂರಲಿಂಗಪ್ಪ. ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ. ಹಾಗೂ ಬಸಪ್ಪ ತಂದೆ ಬಸಪ್ಪ ಅಮ್ಮನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಎಸ್.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

12/7/16